ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1192(1379)

ವಿಧಾನಸಭೆ ಸದಸ್ಯರ ಹೆಸರು : ಶ್ರೀ ವಿಜಯ್ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 18-03-2020

ಉತ್ತರಿಸಬೇಕಾದ ಸಚಿವರು : ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯ ಭಾಗದ ರೈತರಿಗೆ ಅನುಕೂಲವಾಗುವಂತೆ ಯಾವ ಯಾವ ಸಲಕರಣೆಗಳನ್ನು ನೀಡಲಾಗುತ್ತದೆ;	ಬೀದರ್ ಜಿಲ್ಲೆಯ ಭಾಗದ ರೈತರಿಗೆ ಅನುಕೂಲವಾಗುವಂತೆ ಕೃಷಿ ಯಾಂತ್ರೀಕರಣ ಯೋಜನೆಯಡಿ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ ನಾಟಿ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಸಸ್ಯ ಸಂರಕ್ಷಣಾ ಉಪಕರಣಗಳು, ಕೊಯ್ಲು ಮತ್ತು ಒಕ್ಕಣೆ ಯಂತ್ರಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಸಂಸ್ಕರಣ ಘಟಕಗಳು, ಡಿಸೇಲ್ ಪಂಪ್ ಸೆಟ್ ಗಳು ಹೀಗೆ ಭೂಮಿ ಸಿದ್ಧತೆಯಿಂದ ಹಿಡಿದು ಕುಯ್ಲು ಮತ್ತು ಕುಯ್ಲೋತ್ತರ ಉಪಕರಣಗಳನ್ನು ಸಹಾಯಧನದಡಿ ಒದಗಿಸಲಾಗುತ್ತಿದೆ.
ಆ)	ಎಷ್ಟು ರೈತರಿಗೆ ಈ ಸೌಲಭ್ಯ ಒದಗಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	2019-20 ನೇ ಸಾಲಿನಲ್ಲಿ ಒಟ್ಟು 1990 ರೈತರಿಗೆ ಕೃಷಿ ಯಂತ್ರೋಪಕರಣಗಳ ಸೌಲಭ್ಯ ಒದಗಿಸಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ
01	ಭಾಲ್ಕಿ	415
02	ಔರಾದ	245
03	ಹುಮನಾಬಾದ್	303
04	ಬಸವ ಕಲ್ಯಾಣ	301
05	ಬೀದರ್	726
	ಒಟ್ಟು	1990

ಇ)	2018-19 ನೇ ಸಾಲಿನಲ್ಲಿ ಈ ಸಲಕರಣೆಗಳಿಗೆ ನೀಡಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)	2018-19 ನೇ ಸಾಲಿನಲ್ಲಿ ಕೃಷಿ ಉಪಕರಣಗಳನ್ನು ವಿತರಿಸಲು ಬೀದರ್ ಜಿಲ್ಲೆಗೆ ಒಟ್ಟು ರೂ.1325.76 ಲಕ್ಷ ಅನುದಾನ ಒದಗಸಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಅನುದಾನ (ರೂ.ಲಕ್ಷಗಳಲ್ಲಿ)
01	ಭಾಲ್ಕಿ	436.77
02	ಔರಾದ	253.85
03	ಹುಮನಾಬಾದ್	207.96
04	ಬಸವ ಕಲ್ಯಾಣ	229.13
05	ಬೀದರ್	198.05
	ಒಟ್ಟು	1325.76

ಸಂಖ್ಯೆ: **AGRI-ASC-20/2020**

(ಬಿ.ಸಿ.ಪಾಟೀಲ್) 16/3/2020

ಕೃಷಿ ಸಚಿವರು